ದಿಃ 06-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ವಾದಿ ಪರ ಶ್ರೀ. **ATD** ವಕೀಲರಿಂದ:

ದಾವಾ ಆಸ್ತಿ ಸಂಃ 356 ಎಂದರೆ ಸರಿ. ಸಾಕ್ಷಿ ನಂತರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಪೂರ್ವ ಪಶ್ಚಿಮ 50 ಇರುತ್ತದೆ ಎಂದರೆ ಸಾಕ್ಷಿ ನನ್ನ ಆಸ್ತಿ ಪೂರ್ವ ಪಶ್ಚಿಮ 100 ಉತ್ತರ ದಕ್ಷಿಣ 50 ಎಂದು ನುಡಿಯುತ್ತಾರೆ. ವಾದಿಯ ಆಸ್ತಿ ಹಿರಿಯರಿಂದ ಬಂದ ಆಸ್ತಿ ಎಂದರೆ ಸರಿ. ನಾನು ತೆಗೆದುಕೊಂಡ ಆಸ್ತಿ ವಾದಿಯ ಅಣ್ಣ ತಮ್ಮಂದಿರದು ಇರುತ್ತದೆ ಎಂದರೆ ಸರಿಯಲ್ಲ. ವಾದಿ ದಾವಾ ಆಸ್ತಿಯಲ್ಲಿ ಕಬ್ಜೆಯಲ್ಲಿ ಇರುತ್ತಾರೋ ನನಗೆ ಗೊತ್ತಿಲ್ಲ. ಆದರೆ ನನ್ನ ಆಸ್ತಿಯಲ್ಲಿ ನಾನು ಕಬ್ಜೆಯಲ್ಲಿ ಇರುತ್ತೇನೆ. ರಾಚಯ್ಯ ನನ್ನ ತಂದೆ ಅವರು ಖರೀದಿ ಕರಾರು ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆಸ್ತಿ ಸಂಃ 10/ಇ ಖರೀದಿ ಆಗಿಲ್ಲ ಎಂದರೆ ಸರಿಯಲ್ಲ. ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ನನ್ನ ತಂದೆ ಬಡದಾಳ ಗ್ರಾಮದವರು ಇರುವುದಿಲ್ಲ ಎಂದರೆ ಸರಿ. ಅವರು ರೇವೂರುದವರು ಎಂದರೆ ಸರಿ. ನನ್ನ ಸ್ವಂತ ಊರು ಬಡದಾಳ ಇರುವುದಿಲ್ಲ ಎಂದರೆ ಸರಿ. ವಾದಿ ಆಸ್ತಿ ಮತ್ತು ನನ್ನ ಆಸ್ತಿ ಅಕ್ಕ ಪಕ್ಕ ಇರುತ್ತವೆ ಎಂದರೆ ಸರಿ. ನಮ್ಮ ಆಸ್ತಿಯಲ್ಲಿ ಟೀನಶೆಡ ಗಿರಿಣಿ ಇರುತ್ತದೆ ಎಂದರೆ ಸರಿ. ನನ್ನ ಆಸ್ತಿಯ ಪಕ್ಕ ನನ್ನದೇ ಆಸ್ತಿ ಇರುತ್ತದೆ.

ದಾವಾ ಆಸ್ತಿ ಸಂಃ 256 ರಲ್ಲಿ ಅತಿಕ್ರಮಣ ಮಾಡಿ ಶೆಡ ನಿರ್ಮಿಸಿ ಬಾಡಿಗೆ ಕೊಡಲು ಪ್ರಯತ್ನಿಸುತ್ತಿದ್ದೇನೆ ಎಂದರೆ ಸರಿಯಲ್ಲ. ರಾಜು ಕುಂಬಾರ ಮತ್ತು ಅನಿಲ ಬಳಗಾರ ಎನ್ನುವವರಿಗೆ ಟೀನ ಶೆಡ ನಿರ್ಮಿಸಲು ಹೇಳಿದ್ದೆ ಆಗ ವಾದಿ ಬಂದು ತಡೆದಿದ್ದರಿಂದ ಅವರು ಕೆಲಸ ಅರ್ದಕ್ಕೆ ಬಿಟ್ಟು ಓಡಿಹೋಗಿರುತ್ತಾರೆ ಎಂದರೆ ಸರಿಯಲ್ಲ. ನಾನು ವಾದಿಯ ಆಸ್ತಿಯಲ್ಲಿ ಅತಿಕ್ರಮಣ ಪ್ರವೇಶ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ ನನ್ನ ಆಸ್ತಿ ಖರೀದಿ ಆಗ್ದೇ ಇದ್ದರೂ ಸಹ ವಾದಿಯ ಆಸ್ತಿಯಲ್ಲಿ ಅತಿಕ್ರಮಣ ಪ್ರವೇಶ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ ನಾನು ಕೇವಲ ಪಂಚಾಯತಿಯಲ್ಲಿ ಹೆಸರು ಬದಲಾವಣೆ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾಖಲಾತಿಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸಾಕ್ಷಿ ಸುಮ್ಮನೆ ನಿಲ್ಲುತ್ತಾರೆ. ವಾದಿ ಆಸ್ತಿ ಮೇಲೆ ಯಾವುದೇ ಹಕ್ಕು ಇರದೇ ಇದ್ದರೂ ಸಹ ವಾದಿ ಆಸ್ತಿ ಕಬಳಿಸುವ ಉದ್ದೇಶದಿಂದ ಅತಿಕ್ರಮಣ ಪ್ರವೇಶ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ

ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿ ನನಗೆ ಗೊತ್ತಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ